# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 32 (16) |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.12.2021 |
| ಉತ್ತರಿಸುವವರು | : | ಅರಣ್ಯ, ಆಹಾರ, ನಾಗರಿಕ ಸರಬರಾಜು<br>ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೋಲಾರದಲ್ಲಿರುವ ದಕ್ಷಿಣಕಾಶಿ ಅಂತರಗಂಗೆ ಪ್ರವಾಸಿ ಕೇಂದ್ರಕ್ಕೆ ಪ್ರತಿ ವರ್ಷ "ಚಾರಣ" ಮಾಡಲು ಬರುವ ಜನರ ಸಂಖ್ಯೆ ಎಷ್ಟು;</td><td>ಕೋಲಾರದಲ್ಲಿರುವ ದಕ್ಷಿಣಕಾಶಿ ಅಂತರಗಂಗೆ ಬೆಟ್ಟ ಪ್ರದೇಶದಲ್ಲಿ ಚಾರಣ ಚಟುವಟಿಕೆಗಳು ಅಕ್ಟೋಬರ್-2020 ರಿಂದ ಪ್ರಾರಂಭವಾಗಿರುತ್ತವೆ. ದಿನಾಂಕ: 01.10.2020 ರಿಂದ 31.10.2021 ರ ಅಂತ್ಯದವರೆಗೆ ಈ ಪ್ರದೇಶದಲ್ಲಿ ಚಾರಣ ಮಾಡಲು ಬಂದಿರುವ ಚಾರಣಿಗರ ಸಂಖ್ಯೆಯು ಈ ಕೆಳಗಿನಂತಿದೆ.
<table>
<tr><th>ವರ್ಷ</th><th>ಚಾರಣಿಗರ ಸಂಖ್ಯೆ</th></tr>
<tr><td>2020</td><td>1228</td></tr>
<tr><td>2021</td><td>839</td></tr>
<tr><td>ಒಟ್ಟು</td><td>2067</td></tr>
</table>
</td></tr>
<tr><td>ಆ)</td><td>ಪ್ರತಿ ಒಬ್ಬರಿಂದ ಎಷ್ಟು ಹಣ ಪಡೆಯಲಾಗುತ್ತದೆ: ಕಳೆದ 5 ವರ್ಷದಲ್ಲಿ ಸಂಗ್ರಹವಾದ ಹಣ ಎಷ್ಟು ಸರ್ಕಾರಕ್ಕೆ ಸಂಗ್ರಹವಾಗುತ್ತಿದೆ;</td><td>ಪ್ರತಿ ಚಾರಣಿಗರಿಂದ ಚಾರಣ ಶುಲ್ಕ ರೂ. 250.00 ಗಳನ್ನು (ಅರಣ್ಯ ಪ್ರವೇಶ ಶುಲ್ಕ ರೂ.100/-, ನಿಸರ್ಗ ಮಾರ್ಗದರ್ಶಕರ ಶುಲ್ಕ ರೂ.100/- ಮತ್ತು ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ಆಡಳಿತಾತ್ಮಕ ಶುಲ್ಕ ರೂ.50/-) ನಿಗದಿಪಡಿಸಿ ಸಂಗ್ರಹಿಸಲಾಗುತ್ತಿದೆ.<br><br>ಕಳೆದ 5 ವರ್ಷಗಳಿಂದ ಒಟ್ಟು ರೂ.4,87,250/- ಗಳು ಸಂಗ್ರಹವಾಗಿರುತ್ತದೆ.</td></tr>
<tr><td>ಇ)</td><td>ಸರಕಾರದ ಬೊಕ್ಕಸಕ್ಕೆ ಬರಬೇಕಾದ ಹಣ ಗೈಡ್‌ಗಳ ಜೇಬು ಸೇರುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;</td><td>ಈ ವಿಷಯದ ಬಗ್ಗೆ ಯಾವುದೇ ದೂರು ದಾಖಲಾಗಿರುವುದಿಲ್ಲ.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಈ) | ಈ ಪ್ರವಾಸ ತಾಣವನ್ನು ಅಭಿವೃದ್ಧಿಪಡಿಸಲು ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ: ಹಾಗೂ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳಿಗೆ ನಿಗದಿಪಡಿಸಲಾಗಿದೆ; (ಮಾಹಿತಿ ಒದಗಿಸುವುದು) | ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಕೋಲಾರ ಜಿಲ್ಲೆ ಅಂತರಗಂಗೆ ಶ್ರೀ ಕಾಶಿ ವಿಶ್ವೇಶ್ವರ ದೇವಾಲಯವನ್ನು ಸಂಪರ್ಕಿಸುವ ಕೂಡು ರಸ್ತೆ ಅಭಿವೃದ್ಧಿ (ಸಿಮೆಂಟ್ ಕಾಂಕ್ರಿಟ್ ರಸ್ತೆ) ಗಾಗಿ ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಆದೇಶ ಹೊರಡಿಸಲಾಗಿದ್ದು, ಕಾಮಗಾರಿ ಪ್ರಾರಂಭಿಸಬೇಕಿರುತ್ತದೆ.<br><br>ಅಲ್ಲದೇ, ಅಂತರಗಂಗೆ ಪ್ರದೇಶದಲ್ಲಿ ನಡೆಸಲಾಗುವ ಚಾರಣ ಚಟುವಟಿಕೆಗಳಿಗೆ ಮೂಲಭೂತ ಸೌಲಭ್ಯಗಳಾದ ಚಾರಣ ಮಾರ್ಗದ ಅಭಿವೃದ್ಧಿ, ಚಾರಣ ಪ್ರದೇಶ ಮುಂಭಾಗದಲ್ಲಿ ಸೂಚನಾ ಫಲಕ ಹಾಗೂ ಸಿ.ಸಿ. ಕ್ಯಾಮೆರಾ ಅಳವಡಿಕೆಗೆ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯಿಂದ ಒಟ್ಟು ರೂ.10.50 ಲಕ್ಷ ಅನುದಾನವನ್ನು ದಿನಾಂಕ 29-11-2021 ರಂದು ಕೋಲಾರ ವಿಭಾಗಕ್ಕೆ ಮಂಜೂರು ಮಾಡಲಾಗಿದೆ. |
| ಉ) | ಇಲ್ಲಿ ಕಾನೂನುಬಾಹಿರ ಚಟುವಟಿಕೆಗಳು ನಡೆದಿರುವ ಪ್ರಕರಣದ ಸಂಖ್ಯೆಯೆಷ್ಟು; ಹಾಗೂ ಈ ಬಗ್ಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು? | ಪ್ರವಾಸೋದ್ಯಮ ಇಲಾಖೆಯು ಒದಗಿಸಿರುವ, ಅಂತರಗಂಗೆ ಬೆಟ್ಟದಲ್ಲಿ ನಡೆದಿರುವ ಕಾನೂನುಬಾಹಿರ ಚಟುವಟಿಕೆಗಳ ಪ್ರಕರಣಗಳ ಬಗ್ಗೆ ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿರುತ್ತದೆ.<br><br>ಇಂತಹ ಯಾವುದೇ ಪ್ರಕರಣಗಳು ಜರುಗದಂತೆ ಎಚ್ಚರ ವಹಿಸಲು ಅರಣ್ಯ ಇಲಾಖೆಯ ಕ್ಷೇತ್ರ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. |

ಸಂಖ್ಯೆ: ಅಪಜೀ 126 ಎಫ್‌ಪಿಸಿ 2021

(ಉಮೇಶ್ ವಿ. ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಕೋಲಾರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದು ಅಂತರಗಂಗೆ ಬೆಟ್ಟದಲ್ಲಿ ಕಳೆದ 5 ವರ್ಷಗಳಿಂದ ನಡೆದಿರುವ ಕಾನೂನು ಬಾಹಿರ ಚಟುವಟಿಕೆಗಳ ಮೇಲೆ ದಾಖಲಾಗಿರುವ ಪ್ರಕರಣಗಳ ವಿವರ.

| ಕ್ರ.ಸಂ | ಮೊ.ಸಂ ಮತ್ತು ಕಲಂ | ಕೃ.ನ.ದಿನ | ಕೃ.ವ.ದಿನ | ಕೃ.ನ.ಸ್ಥಳ | ಪಿರ್ಯಾಧಿ ಹೆಸರು ಮತ್ತು ವಿಳಾಸ | ಆರೋಪಿತರ ಹೆಸರು ಮತ್ತು ವಿಳಾಸ | ಪ್ರಕರಣದ, ಸಂಕ್ಷಿಪ್ತ |
|---|---|---|---|---|---|---|---|
| 1 | 164/2019, ಕಲಂ-379 ಐಪಿಸಿ | ದಿ.01/05/2019 ರಂದು | ದಿ.01/05/2019 | ಅಂತರಗಂಗೆ, ಕೋಲಾರ ತಾಲ್ಲೂಕು. | ಗಣೇಶ.ಕೆ ಬಿನ್ ಕಣ್ಣನ್, ವಾಸ- # 31, 4ನೇ ಕ್ರಾಸ್, ಗಣೇಶಗುಡಿ ಹತ್ತಿರ. | ಯಾರೋ ಕಳ್ಳರು | ದಿನಾಂಕ;01.05.2019 ರಂದು ಪಿರ್ಯಾದಿಯವರು ತನ್ನ ದ್ವಿಚಕ್ರ ವಾಹನವನ್ನು ನಿಲ್ಲಿಸಿ ದೇವಸ್ಥಾನಕ್ಕೆ ಹೋಗಿ ಬರುವಷ್ಟರಲ್ಲಿ ಯಾರೋ ಕಳ್ಳರು ಸುಮಾರು 25000 ರೂ ಬೆಲೆ ಬಾಳುವ ಟಿ.ವಿ ಎಸ್ ಪಿಯಾರೋ ದ್ವಿಚಕ್ರ ವಾಹನವನ್ನು ಕಳ್ಳತನ ಮಾಡಿಕೊಂಡು ಹೋಗಿರುವುದಾಗಿ ದೂರು. |
| 2 | 267/2019, ಕಲಂ-394 ಐಪಿಸಿ. | ದಿ.29/06/2019 ರಂದು 13:45 | ದಿ. 29/06/2019 ರಂದು 22:30 ಗಂಟೆಗೆ | ಅಂತರಗಂಗೆ ಬೆಟ್ಟದ ತಪ್ಪಲಿನಲ್ಲಿ. | ದೇವರತ್ ಮಹೇಂದ್ರ, ಇ401, ರುತುರಂಗ್ ಸೊಸೈಟಿ, ಸಹಕಾರ ನಗರ, ಪುಣೆ. | 1.ಪುರುಷೋತ್ತಮ್, ಟೂರಿಸ್ಟ್ ಗಾರ್ಡ್. 2. ಇತರೆ ಇಬ್ಬರು ಆಸಾಮಿಗಳು (20 ವರ್ಷ) ಹೆಸರು ಮತ್ತು ವಿಳಾಸ ತಿಳಿಯ ಬೇಕಾಗಿರುತ್ತೆ. | ದಿನಾಂಕ;29.06.2019 ರಂದು ಪಿರ್ಯಾದಿಯವರನ್ನು ಬೆಟ್ಟದಲ್ಲಿ ಟ್ರಕಿಂಗ್ ನೆಪದಲ್ಲಿ ಗೈಡ್ ಮಾಡುವುದಾಗಿ ತಿಳಿಸಿ ಬೆಟ್ಟಕ್ಕೆ ಕರೆದುಕೊಂಡು ಹೋಗಿ ನಂತರ ಹೊಡೆದು ಪಿರ್ಯಾದಿಯವರ ಬಳಿ ಇದ್ದ ಮೊಬೈಲ್ ಎ.ಟಿ.ಎಂ ಕಾರ್ಡ್ ಮತ್ತು 5000 ರೂ ನಗದು ಹಣವನ್ನು ಕಿತ್ತುಕೊಂಡು ಹೋಗಿರುವುದಾಗಿ ದೂರು. |
| 3 | 474/2019, ಕಲಂ-457, 380 ಐಪಿಸಿ | ದಿ.13/12/2019 ರಂದು ರಾತ್ರಿ | ದಿ.14/12/2019 ರಂದು ಸಂಜೆ 4:00 ಗಂಟೆಗೆ | ಕಾಶಿ ವಿಶ್ವೇಶರ ಸ್ವಾಮಿ ದೇವಸ್ಥಾನ ಅಂತರಗಂಗೆ | ಶ್ರೀಮತಿ ಸುಜಾತ ಕೆ.ಎನ್ ಕೋಂ ರಾಮಚಂದ್ರ ಕಾರ್ಯನಿರ್ವಾಹಕ ಅಧಿಕಾರಿಗಳು | ಯಾರೋ ಕಳ್ಳರು | ದಿನಾಂಕ;13.12.2019 ರಂದು ರಾತ್ರಿ ಕಾಶಿ ವಿಶ್ವೇಶರ ಸ್ವಾಮಿ ದೇವಸ್ಥಾನ ಅಂತರಗಂಗೆ ದೇವಸ್ಥಾನದ ಬಾಗಿಲನ್ನು ಹೊಡೆದುಹಾಕಿ ಹುಂಡಿಯನ್ನು ಕಳ್ಳತನ ಮಾಡಲು ಪ್ರಯತ್ನಿಸಿದ್ದು ಸಾಧ್ಯವಾಗದ ಕಾರಣ ಸಿಸಿ ಟಿ.ವಿ ಗೆ ಅಳವಡಿಸಿದ್ದ ಸುಮಾರು 21900 ರೂ ಬೆಲೆ ಬಾಳುವ ಡಿ.ವಿ.ಆರ್.ಮಾನಿಟರ್, ಹಾರ್ಡ್‌ಡಿಸ್ಕನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು ಕಾನೂನು ಕ್ರಮಕ್ಕಾಗಿ ದೂರು. |

PI
POLICE INSPECTOR
KOLAR RURAL POLICE STATION
KOLAR

Scanned with CamScanner


Book now @
My eco trip
Distan
Start po
End point-
Duration - 2
Timing - 6:00 Am
Reporting time-
Rs:- 250/- per head
(only
Karnataka
Ecotrail
www.
TRESPASSES WILL BE PRO
* SEC 24(ii) KFA
* IMPRISONMENT FOR ONE YEA
WITH FINE UPTO TWO THOUSAND
RANGE F
KOLAR